# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 1574
2. ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 11.03.2022
4. ಉತ್ತರಿಸುವವರು : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ತಾಲ್ಲೂಕು . ಪಂಚಾಯಿತಿಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು; ಕೊರತೆಯಿರುವ ಹುದ್ದೆಗಳ ಸಂಖ್ಯೆ ಎಷ್ಟು; ಕೊರತೆಯನ್ನು ಯಾವಾಗ ತುಂಬಲಾಗುವುದು; (ಜಿಲ್ಲಾವಾರು, ತಾಲ್ಲೂಕು ಪಂಚಾಯಿತಿವಾರು ಹುದ್ದೆವಾರು ಮಾಹಿತಿ ನೀಡುವುದು)</td><td>
ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ಒಟ್ಟು 07 ತಾಲ್ಲೂಕು ಪಂಚಾಯಿತಿಗಳು ಹಾಗೂ ಉಡುಪಿ ಜಿಲ್ಲೆಯ ವ್ಯಾಪ್ತಿಯಲ್ಲಿ 07 ತಾಲ್ಲೂಕು ಪಂಚಾಯಿತಿಗಳು ಅಸ್ತಿತ್ವದಲ್ಲಿರುತ್ತವೆ.
ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿ ಹಾಗೂ ಅದರಡಿಯ ತಾಲ್ಲೂಕು ಪಂಚಾಯಿತಿಗಳಲ್ಲಿನ ಹುದ್ದೆಗಳ ವಿವರಗಳು ಈ ಕೆಳಕಂಡಂತಿವೆ.
ದಕ್ಷಿಣ ಕನ್ನಡ ಜಿಲ್ಲೆ
<table>
<tr><th></th><th>ಸಂಖ್ಯೆ</th><th>ಮಂಜೂರಾದ ಹುದ್ದೆ</th><th>ಭರ್ತಿಯಾದ ಹುದ್ದೆ</th><th>ಖಾಲಿ ಹುದ್ದೆ</th></tr>
<tr><td>ಜಿಲ್ಲಾ ಪಂಚಾಯಿತಿ</td><td>1</td><td>94</td><td>21</td><td>73</td></tr>
<tr><td>ತಾ.ಪಂ.ಗಳು</td><td>7</td><td>151</td><td>17</td><td>134</td></tr>
</table>
ಉಡುಪಿ ಜಿಲ್ಲಾ ಪಂಚಾಯಿತಿ ಹಾಗೂ ಅದರಡಿಯ ತಾಲ್ಲೂಕು ಪಂಚಾಯಿತಿಗಳಲ್ಲಿನ ಹುದ್ದೆಗಳ ವಿವರಗಳು ಈ ಕೆಳಕಂಡಂತಿವೆ.
ಉಡುಪಿ ಜಿಲ್ಲೆ:
<table>
<tr><th></th><th>ಸಂಖ್ಯೆ</th><th>ಮಂಜೂರಾದ ಹುದ್ದೆ</th><th>ಭರ್ತಿಯಾದ ಹುದ್ದೆ</th><th>ಖಾಲಿ ಹುದ್ದೆ</th></tr>
<tr><td>ಜಿಲ್ಲಾ ಪಂಚಾಯಿತಿ</td><td>1</td><td>87</td><td>27</td><td>60</td></tr>
<tr><td>ತಾ.ಪಂ.ಗಳು</td><td>7</td><td>136</td><td>15</td><td>120</td></tr>
</table>
ಈ ಹಿಂದೆ ಚಾಲ್ತಿಯಲ್ಲಿದ್ದ ವೃಂದ ಮತ್ತು ನೇಮಕಾತಿ ನಿಯಮಗಳನುಸಾರ ಜಿಲ್ಲಾ ಪಂಚಾಯತ್ / ತಾಲ್ಲೂಕು ಪಂಚಾಯತ್‌ಗಳಿಗೆ ಮಂಜೂರಾದ ಹುದ್ದೆಗಳನ್ನು ನೇರ ನೇಮಕಾತಿಯಡಿ ಭರ್ತಿ ಮಾಡಲು ಅವಕಾಶ ಕಲ್ಪಿಸಿರಲಿಲ್ಲ. ಇತ್ತೀಚೆಗೆ ಅಧಿಸೂಚನೆ ಸಂಖ್ಯೆ: ಗ್ರಾಅಪ 142 ಕೆ.ಎಸ್‌ಎಸ್. 2016, ದಿನಾಂಕ: 20.07.2021ರಲ್ಲಿ ಹೊಸದಾಗಿ ಕರ್ನಾಟಕ ಸಾಮಾನ್ಯಸೇವೆ (ಪಂಚಾಯತ್ ರಾಜ್ ವಿಭಾಗ) (ವೃಂದ ಮತ್ತು ನೇಮಕಾತಿ ನಿಯಮಗಳು) 2020ನ್ನು ರಚಿಸಿದ್ದು, ಅದರಲ್ಲಿ ನಿರ್ದಿಷ್ಟ ಪ್ರಮಾಣದ
</td></tr>
</table>

| | | |
|---|---|---|
| | | ಹುದ್ದೆಗಳನ್ನು ನೇರ ನೇಮಕಾತಿಯಡಿ ಭರ್ತಿ ಮಾಡಲು ಅವಕಾಶ ಇರುವುದರಿಂದ ನೇರ ನೇಮಕಾತಿಗೆ ಲಭ್ಯವಾಗುವ ಹುದ್ದೆಗಳನ್ನು ಭರ್ತಿ ಮಾಡಲು ಅವಕಾಶ ಇದ್ದು ಈ ದಿಸೆಯಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ.<br>ಖಾಲಿ ಹುದ್ದೆಗಳ ಎದುರಿಗೆ ಹೊರಗುತ್ತಿಗೆ / ನಿಯೋಜನೆ ಮೇಲೆ ಪಡೆಯಲು ಅವಕಾಶ ಇರುವ ಹುದ್ದೆಗಳ ಎದುರಿಗೆ ಹೊರಗುತ್ತಿಗೆ / ಬಾಹ್ಯ ಮೂಲಗಳಿಂದ ನೌಕರರನ್ನು ಪಡೆದು ಕಾರ್ಯನಿರ್ವಹಿಸಲಾಗುತ್ತಿದೆ. |
| ಆ) | ರಾಜ್ಯದಲ್ಲಿ ಗ್ರಾಮ ಪಂಚಾಯಿತಿಗಳ ಸಿಬ್ಬಂದಿ ಹುದ್ದೆಗಳು ಯಾವುವು; ಸರ್ಕಾರದಿಂದ ಗ್ರಾಮ ಪಂಚಾಯಿತಿ ಸಿಬ್ಬಂದಿ ನೇಮಕಾತಿ ನಿಯಮಾವಳಿಯನ್ನು ಅಂತಿಮಪಡಿಸಲಾಗಿದೆಯೇ; (ಪ್ರತಿಯನ್ನು ಒದಗಿಸುವುದು) | ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಸ್ತರದ ಸಿಬ್ಬಂದಿಗಳ ವಿವರ ಈ ಕೆಳಕಂಡಂತಿದೆ.<br>**ಕ್ರಮ ಸಂಖ್ಯೆ** — **ಸಿಬ್ಬಂದಿ ಪದನಾಮ**<br>1 — ಕರ ವಸೂಲಿಗಾರ<br>2 — ಕ್ಲರ್ಕ್, ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್<br>3 — ಡಾಟಾ ಎಂಟ್ರಿ ಆಪರೇಟರ್<br>4 — ವಾಟರ್ ಆಪರೇಟರ್<br>5 — ಅಟೆಂಡೆಂಟ್<br>6 — ಕ್ಲೀನರ್ಸ್<br>ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ 886 ಗ್ರಾಪಂಕಾ 2016, ದಿನಾಂಕ: 29.09.2020ರಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿ ಸಿಬ್ಬಂದಿ ಸ್ವರೂಪ, ವೇತನ ಶ್ರೇಣಿಗಳು, ನೇಮಕಾತಿ ವಿಧಾನ ಮತ್ತು ಇತರೆ ಸೇವಾ ಷರತ್ತುಗಳು) ನಿಯಮಗಳು 2020ನ್ನು ರೂಪಿಸಲಾಗಿದ್ದು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 112 ಮತ್ತು 113ರಂತೆ ಗ್ರಾಮ ಪಂಚಾಯಿತಿಗಳ ಸಿಬ್ಬಂದಿ ವರ್ಗದ ಸ್ವರೂಪ, ನೇಮಕಾತಿ ವಿಧಾನ ಮತ್ತು ಇತರೆ ಸೇವಾ ಷರತ್ತುಗಳನ್ನು ನಿರ್ದಿಷ್ಟಪಡಿಸಲಾಗಿದೆ. ಅಧಿಸೂಚನೆ ಪ್ರತಿಯನ್ನು **ಅನುಬಂಧ**ದಲ್ಲಿ ನೀಡಿದೆ. |
| ಇ) | ಪ್ರಸ್ತುತ ಈ ನಿಯಮಾವಳಿಗಳಿಂದ ಗ್ರಾಮ ಪಂಚಾಯಿತಿಗಳು ಸಿಬ್ಬಂದಿ ನೇಮಕಾತಿ ಮಾಡಿಕೊಳ್ಳಲು ತೊಡಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರಿಂದ ಕುಡಿಯುವ ನೀರು ಮತ್ತು ನೈರ್ಮಲ್ಯದ ಚಟುವಟಿಕೆಯಂತಹ ಕಾರ್ಯ ಚಟುವಟಿಕೆಯನ್ನು ನಡೆಸಲು ಕೂಡಾ ತೊಂದರೆಯಾಗಿರುವುದು | ಹೌದು<br>ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ 886 ಗ್ರಾಪಂಕಾ 2016, ದಿನಾಂಕ: 29.09.2020ರಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿ ಸಿಬ್ಬಂದಿ ಸ್ವರೂಪ ವೇತನ ಶ್ರೇಣಿಗಳು, ನೇಮಕಾತಿ ವಿಧಾನ ಮತ್ತು ಇತರೆ ಸೇವಾ ಷರತ್ತುಗಳು) ನಿಯಮಗಳು 2020ನ್ನು ರೂಪಿಸಲಾಗಿದ್ದು, ಸದರಿ ಅಧಿಸೂಚನೆಯಲ್ಲಿ ಗ್ರಾಮ ಪಂಚಾಯಿತಿಯ ಹುದ್ದೆಗಳ ಸಂಖ್ಯೆಯನ್ನು ಪ್ರತ್ಯೇಕವಾದ ಸರ್ಕಾರಿ ಆದೇಶದಲ್ಲಿ ನಿಗದಿಪಡಿಸುವುದಾಗಿ ತಿಳಿಸಿದ್ದು, ಅದರಂತೆ ಗ್ರಾಮ ಪಂಚಾಯಿತಿಗಳಿಗೆ ಅಗತ್ಯವಿರುವ ಹುದ್ದೆಗಳನ್ನು ಗುರುತಿಸಲು ನಿರ್ದೇಶಕರು (ಪಂಚಾಯತ್ ರಾಜ್-1) ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿತ್ತು.<br>ಮೇಲ್ಕಂಡ ಸಮಿತಿಯು ಪ್ರತಿಯೊಂದು ಗ್ರಾಮ ಪಂಚಾಯಿತಿಗೆ ಅಗತ್ಯವಿರುವ (1)ಕರವಸೂಲಿಗಾರ (2)ಕ್ಲರ್ಕ್ ಕಂ. ಡಾಟಾ ಎಂಟ್ರಿ ಆಪರೇಟರ್ (3) ಡಾಟಾ ಎಂಟ್ರಿ ಆಪರೇಟರ್ (4) ವಾಟರ್ ಆಪರೇಟರ್ (5) ಅಟೆಂಡೆಂಟ್ ಮತ್ತು (6) ಕ್ಲೀನರ್ ಸಿಬ್ಬಂದಿ ಹುದ್ದೆಗಳನ್ನು ಗುರುತಿಸಿ ಸರ್ಕಾರಕ್ಕೆ ವರದಿ ನೀಡಿದ್ದು, ಸದರಿ |

| | | |
|---|---|---|
| | ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರದ ಕ್ರಮವೇನು; | ವರದಿಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಅಂತಿಮ ನಿರ್ಧಾರ ಕೈಗೊಂಡ ನಂತರ ಗ್ರಾಮ ಪಂಚಾಯಿತಿಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ನಿಯಮಾನುಸಾರ ಕ್ರಮ ವಹಿಸಲಾಗುವುದು. |
| **ಈ)** | ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿಗಳ ಡಾಟಾ ಎಂಟ್ರಿ ಆಪರೇಟರ್ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗುತ್ತಿಗೆ ನೌಕರರ ಸಂಖ್ಯೆ ಎಷ್ಟು; ಈ ಹುದ್ದೆಯ ಖಾಯಂ ನೇಮಕಾತಿಗೆ ಸರ್ಕಾರದ ಕ್ರಮವೇನು; ಹಾಗೂ ಇವರಿಗೆ ಪಿ.ಎಫ್. ಇಎಸ್‌ಐ ಸೌಲಭ್ಯ ದೊರಕುತ್ತಿದೆಯೇ? | ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮ ಪಂಚಾಯಿತಿಗಳ ಡಾಟಾ ಎಂಟ್ರಿ ಆಪರೇಟರ್ ಹುದ್ದೆಯಲ್ಲಿ ಗುತ್ತಿಗೆ ನೌಕರರು ಕಾರ್ಯನಿರ್ವಹಿಸುತ್ತಿರುವುದಿಲ್ಲ. |

**ಸಂಖ್ಯೆ: ಗ್ರಾಅಪ 09 ಪಬವ 2022**

**(ಕೆ.ಎಸ್. ಈಶ್ವರಪ್ಪ)**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಅನುಬಂಧ

## ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 886 ಗ್ರಾಪಂಕಾ 2016

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:29-09-2020

### ಅಧಿಸೂಚನೆ

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14)ರ ಪ್ರಕರಣ 62 ರ ಉಪ ಪ್ರಕರಣ (1)ರ ಖಂಡ 'ಡಿ' ಮತ್ತು ಪ್ರಕರಣ 112 ಮತ್ತು 113 ರೊಡನೆ ಓದಿಕೊಂಡಂತೆ ಪ್ರಕರಣ 311 ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ (ಗ್ರಾಮ ಪಂಚಾಯತಿಯ ಸಿಬ್ಬಂದಿಯ ಸ್ವರೂಪ, ವೇತನ ಶ್ರೇಣಿಗಳು, ನೇಮಕಾತಿ ವಿಧಾನ ಮತ್ತು ಸೇವಾ ಷರತ್ತುಗಳು) ನಿಯಮಗಳು 2020 ರ ಕರಡನ್ನು ದಿನಾಂಕ:05-03-2020 ರ ಕರ್ನಾಟಕ ರಾಜ್ಯ ಪತ್ರದ ಭಾಗ-IV-A ರಲ್ಲಿ ಪ್ರಕಟಿಸಿ, ಅದರಿಂದ ಬಾಧಿತರಾಗುವ ವ್ಯಕ್ತಿಗಳಿಂದ ಸದರಿ ಕರಡಿಗೆ ಆಕ್ಷೇಪಣೆ ಮತ್ತು ಸಲಹೆಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಸಲ್ಲಿಸಬೇಕೆಂದು ಕೋರಿರುವುದರಿಂದ;

ಮತ್ತು ಸದರಿ ರಾಜ್ಯ ಪತ್ರವು ಸಾರ್ವಜನಿಕರಿಗೆ ದಿನಾಂಕ:05-03-2020 ರಂದು ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು, ಸದರಿ ಕರಡಿನ ಸಂಬಂಧದಲ್ಲಿ ರಾಜ್ಯ ಸರ್ಕಾರದಲ್ಲಿ ಸ್ವೀಕೃತವಾಗಿರುವ ಆಕ್ಷೇಪಣೆ ಅಥವಾ ಸಲಹೆಗಳನ್ನು ಪರಿಗಣಿಸಿರುವುದರಿಂದ;

ಈಗ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14)ರ 311 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ನಿಯಮಗಳನ್ನು ರಚಿಸುತ್ತದೆ, ಎಂದರೆ:-

### ನಿಯಮಗಳು

**1. ಹೆಸರು, ಪ್ರಾರಂಭ ಮತ್ತು ಅನ್ವಯಿಸುವಿಕೆ.-** (1) ಈ ನಿಯಮಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿ ಸಿಬ್ಬಂದಿ ಸ್ವರೂಪ, ವೇತನ ಶ್ರೇಣಿಗಳು, ನೇಮಕಾತಿ ವಿಧಾನ ಮತ್ತು ಇತರೆ ಸೇವಾ ಷರತ್ತುಗಳು) ನಿಯಮಗಳು, 2020 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಕರ್ನಾಟಕ ರಾಜ್ಯಪತ್ರದಲ್ಲಿ ಅಂತಿಮವಾಗಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(3) ಈ ನಿಯಮಗಳು ಕರ್ನಾಟಕ ರಾಜ್ಯದಲ್ಲಿನ ಗ್ರಾಮ ಪಂಚಾಯಿತಿಗಳ ವ್ಯವಹರಣೆಗೆ ಸಂಬಂಧಿಸಿದಂತೆ ಸರ್ಕಾರ ಅಥವಾ ಪಂಚಾಯತ್ ರಾಜ್ ಆಯುಕ್ತಾಲಯದಿಂದ ನೇಮಕಾತಿ ಮಾಡಲ್ಪಟ್ಟ ಹುದ್ದೆಗಳನ್ನು ಹೊರತುಪಡಿಸಿ ಇತರೆ ಎಲ್ಲಾ ಹುದ್ದೆಗಳ ನೇಮಕಾತಿಗೆ ಅನ್ವಯಿಸುತ್ತವೆ. ಈ ನಿಯಮಗಳಡಿಯಲ್ಲಿ ನೇಮಕಗೊಂಡ ಅಭ್ಯರ್ಥಿಗಳು ಸ್ಥಳೀಯ ಸಂಸ್ಥೆಯ ನೌಕರರು.

**2. ಪರಿಭಾಷೆಗಳು.-** ಈ ನಿಯಮಗಳಲ್ಲಿ ಸಂದರ್ಭಾನುಸಾರ ಅಗತ್ಯವೆನಿಸಿದ ಹೊರತು,-

(ಎ) **"ಅಧಿನಿಯಮ"** ಎಂದರೆ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14).



Scanned with CamScanner

(ಬಿ) "ನೇಮಕಾತಿ ಪ್ರಾಧಿಕಾರ" ಎಂದರೆ, ಸಂಬಂಧಿಸಿದ ಗ್ರಾಮ ಪಂಚಾಯಿತಿ.

(ಸಿ) "ಆಯ್ಕೆ ಸಮಿತಿ" ಎಂದರೆ ನಿಯಮ 4ರಡಿ ರಚಿಸಿರುವ ಸಮಿತಿ.

(ಡಿ) "ನೇರ ನೇಮಕಾತಿ" ಎಂದರೆ, ಈ ನಿಯಮಗಳ ಅಡಿಯಲ್ಲಿ ಗ್ರಾಮ ಪಂಚಾಯಿತಿಯಲ್ಲಿ ಷೆಡ್ಯೂಲ್‌ನಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಸೇವೆ ಅಥವಾ ಹುದ್ದೆಗೆ ಪದೋನ್ನತಿ, ವರ್ಗಾವಣೆ ಅಥವಾ ನಿಯೋಜನೆ ಹೊರತಾದ ನೇಮಕಾತಿ ಮಾಡುವುದು.

(ಇ) "ಶಿಸ್ತು ಪ್ರಾಧಿಕಾರ" ಎಂದರೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿ.

(ಎಫ್) "ಸಿಬ್ಬಂದಿ" ಎಂದರೆ, ಈ ನಿಯಮಗಳ ಅಡಿಯಲ್ಲಿ ಗ್ರಾಮ ಪಂಚಾಯತಿಯಲ್ಲಿ ಷೆಡ್ಯೂಲ್‌ನಲ್ಲಿ ನಿರ್ದಿಷ್ಟಪಡಿಸಿರುವ ವರ್ಗದ ಹುದ್ದೆಗೆ ನೇಮಕ ಹೊಂದಿದ ವ್ಯಕ್ತಿ.

ಜಿ) "ಸಾಮಾನ್ಯವಾಗಿ" ಪ್ರತಿಯೊಬ್ಬ ಗ್ರಾಮ ಪಂಚಾಯಿತಿ ನೌಕರನು ಎಲ್ಲಾ ಸಮಯದಲ್ಲೂ ಇರಬೇಕು.

(i) ಸಂಪೂರ್ಣ ಸಮಗ್ರತೆಯನ್ನು ಕಾಪಾಡಿಕೊಳ್ಳುವುದು.

(ii) ಕರ್ತವ್ಯ ನಿಷ್ಠೆಯನ್ನು ಕಾಪಾಡಿಕೊಳ್ಳುವುದು ಮತ್ತು

(iii)ಗ್ರಾಮ ಪಂಚಾಯಿತಿ ನೌಕರನಿಗೆ ತರವಲ್ಲದ ಕಾರ್ಯಗಳನ್ನು ಮಾಡಬಾರದು ಹಾಗೂ – ಯಾವುದೇ ಉಲ್ಲಂಘನೆಯು ದುರ್ವರ್ತನೆಯಾಗುತ್ತದೆ.

ಹೆಚ್) "ವಿಚಾರಣಾ ಪ್ರಾಧಿಕಾರ" ಎಂದರೆ ಶಿಸ್ತು ಪ್ರಾಧಿಕಾರದಡಿಯಲ್ಲಿ ಕೆಲಸ ಮಾಡುವ ಯಾವುದೇ ಸರ್ಕಾರಿ ನೌಕರ.

(ಐ) "ಬಡ್ತಿ" ಎಂದರೆ, ಈ ನಿಯಮಗಳ ಅಡಿಯಲ್ಲಿ ಗ್ರಾಮ ಪಂಚಾಯಿತಿಯಲ್ಲಿ ಒಬ್ಬ ಸಿಬ್ಬಂದಿಯನ್ನು ಕೆಳಗಿನ ಹುದ್ದೆ ಅಥವಾ ದರ್ಜೆ ಅಥವಾ ವರ್ಗದ ಸೇವೆಯಿಂದ ಉನ್ನತ ಹುದ್ದೆ ಅಥವಾ ಉನ್ನತ ದರ್ಜೆ ಅಥವಾ ಉನ್ನತ ವರ್ಗದ ಸೇವೆಗೆ ನೇಮಕಾತಿ ಮಾಡುವುದು.

(ಜೆ) "ಷೆಡ್ಯೂಲ್" ಎಂದರೆ ಈ ನಿಯಮಗಳಿಗೆ ಅನುಬಂಧಿಸಿದ ಷೆಡ್ಯೂಲ್; ಮತ್ತು

(ಕೆ) "ಪ್ರಕರಣ" ಎಂದರೆ, ಅಧಿನಿಯಮದ ಪ್ರಕರಣ.

3. **ನೇಮಕಾತಿ ವಿಧಾನ,–** ಷೆಡ್ಯೂಲ್ –I ರ ಕಲಂ (2) ರಲ್ಲಿ ನಿರ್ದಿಷ್ಟಪಡಿಸಿದ ಹುದ್ದೆಯ ವರ್ಗವನ್ನೊಳಗೊಂಡ ಗ್ರಾಮ ಪಂಚಾಯಿತಿಯ ಒಂದು ಸೇವೆ ಇರತಕ್ಕದ್ದು, ಅವುಗಳ ಹುದ್ದೆಗಳ ಸಂಖ್ಯೆಗಳು, ನೇಮಕಾತಿ ವಿಧಾನ ಮತ್ತು ಕನಿಷ್ಠ ವಿದ್ಯಾರ್ಹತೆ ಏನಾದರೂ ಇದ್ದಲ್ಲಿ ಅವುಗಳಿಗೆ ಹೊಂದಿಕೊಂಡಿರುವ ಕಲಂ (3) ಮತ್ತು (4) ರಲ್ಲಿ ನಮೂದಿಸಿರುವಂತೆ ಇರತಕ್ಕದ್ದು.

4. **ಆಯ್ಕೆ ಸಮಿತಿ,–** (1) ಷೆಡ್ಯೂಲ್–I ರಲ್ಲಿ ನಿರ್ದಿಷ್ಟ ಪಡಿಸಿದಂತೆ ಗ್ರಾಮ ಪಂಚಾಯಿತಿಗಳಿಗೆ ಸಂಬಂಧಿಸಿದ ಹುದ್ದೆಗಳಿಗೆ ನೇರ ನೇಮಕಾತಿ ಮಾಡುವ ಸಲುವಾಗಿ ಆಯಾ ಜಿಲ್ಲೆಗಳಲ್ಲಿ ಈ ಕೆಳಕಂಡ ಸದಸ್ಯರನ್ನೊಳಗೊಂಡ ಆಯ್ಕೆ ಸಮಿತಿ ಇರತಕ್ಕದ್ದು, ಅಂದರೆ,–

| | | |
|---|---|---|
| ಎ | ಸಂಬಂಧಿಸಿದ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ. | ಅಧ್ಯಕ್ಷರು |
| ಬಿ | ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ. | ಸದಸ್ಯರು |
| ಸಿ | ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ. | ಸದಸ್ಯರು |
| ಡಿ | ಜಿಲ್ಲಾ ಅಲ್ಪ ಸಂಖ್ಯಾತರ ಕಲ್ಯಾಣ ಅಧಿಕಾರಿ. | ಸದಸ್ಯರು |
| ಇ | ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ. | ಸದಸ್ಯರು |
| ಎಫ್ | ಸಂಬಂಧಿಸಿದ ಜಿಲ್ಲಾ ಪಂಚಾಯಿತಿಯ ಉಪಕಾರ್ಯದರ್ಶಿ (ಗ್ರಾಮ ಪಂಚಾಯಿತಿ ನೌಕರರ ಸೇವಾ ವಿಷಯಗಳನ್ನು ನಿರ್ವಹಿಸುವ) | ಸದಸ್ಯ ಕಾರ್ಯದರ್ಶಿ |



Scanned with CamScanner

(13)

(2) ಆಯ್ಕೆ ಸಮಿತಿಯು ಕನಿಷ್ಠ 6 ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು. ಮತ್ತು ಸಂಬಂಧಿಸಿದ ಜಿಲ್ಲೆಯ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಉದ್ಭವವಾಗುವ ಖಾಲಿ ಹುದ್ದೆಗಳ ಬಗ್ಗೆ ಪುನರಾವಲೋಕಿಸುವುದು ಮತ್ತು ಜಿಲ್ಲಾ ಪಂಚಾಯಿತಿಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯ ಪೂರ್ವಾನುಮತಿ ಪಡೆದ ನಂತರ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಕ್ರಮ ವಹಿಸತಕ್ಕದ್ದು.

(3) ಆಯ್ಕೆ ಸಮಿತಿಯು ನೇರ ನೇಮಕಾತಿಗಾಗಿ ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವ ವಿಧಾನವನ್ನು ಅನುಸರಿಸುವುದು.

(4) ಆಯ್ಕೆ ಸಮಿತಿಯು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಬೇಕಾದ ಖಾಲಿ ಹುದ್ದೆಗಳ ಮಾಹಿತಿಯನ್ನು ಪಡೆದು ಹುದ್ದೆಯ ವರ್ಗ, ವಯೋಮಿತಿ, ವಿದ್ಯಾರ್ಹತೆ ಮತ್ತು ಇತರೆ ವಿವರಗಳು ಹಾಗೂ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ನಿಗದಿಪಡಿಸಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಕನಿಷ್ಠ ಒಂದು ಕನ್ನಡ ದಿನ ಪತ್ರಿಕೆಯನ್ನೊಳಗೊಂಡಂತೆ ಜಿಲ್ಲೆಯಲ್ಲಿ ಹೆಚ್ಚು ಪ್ರಸಾರದಲ್ಲಿರುವ ದಿನ ಪತ್ರಿಕೆಗಳಲ್ಲಿ. ನೇಮಕಾತಿಗಾಗಿ ಜಾಹೀರಾತು ಪ್ರಕಟ ಪಡಿಸತಕ್ಕದ್ದು.

(5) ಆಯಾ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ವಾಸಿಸುವ ವ್ಯಕ್ತಿಗಳು ಆಯಾ ಗ್ರಾಮ ಪಂಚಾಯತಿ ಹುದ್ದೆಗಳಿಗೆ ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರತಕ್ಕದ್ದು.

(6) ವಯೋಮಿತಿ:- ನೇಮಕಾತಿ ನಿಯಮಗಳಲ್ಲಿ ವಿಶೇಷವಾಗಿ ಒದಗಿಸಲಾದ ಮತ್ತು ಯಾವುದೇ ಸೇವೆ ಅಥವಾ ಹೆಚ್ಚಿನ ವಯಸ್ಸಿನ ಮಿತಿಯನ್ನು ಸೂಚಿಸುವ ಹುದ್ದೆಗೆ ಅನ್ವಯಿಸಿದಂತೆ ಹೊರತುಪಡಿಸಿ, ನೇರ ನೇಮಕಾತಿಯ ಮೂಲಕ ನೇಮಕಾತಿಗಾಗಿ ಪ್ರತಿಯೊಬ್ಬ ಅಭ್ಯರ್ಥಿಯು ಅರ್ಜಿಗಳನ್ನು ಸ್ವೀಕೃತಿಗಾಗಿ ನಿಗದಿಪಡಿಸಿದ ಕೊನೆಯ ದಿನಾಂಕದಂದು ಹದಿನೆಂಟು ವರ್ಷಗಳಿಗೆ ಕಡಿಮೆ ಇಲ್ಲದಂತೆ ಮತ್ತು ಈ ಕೆಳಕಂಡ ವಯಸ್ಸನ್ನು ಮೀರದಂತ ವಯೋಮಿತಿಯಲ್ಲಿರತಕ್ಕದ್ದು.

ಎ) ಯಾವುದೇ ಸಂದರ್ಭದಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಅಥವಾ ಹಿಂದುಳಿದ ವರ್ಗ-I ಕ್ಕೆ ಸೇರಿದ ವ್ಯಕ್ತಿಗೆ ಸಂಬಂಧಿಸಿದಂತೆ ನಲವತ್ತು ವರ್ಷಗಳು;

ಬಿ) ಹಿಂದುಳಿದ ವರ್ಗಗಳ ಯಾವುದೇ ವರ್ಗ IIಎ ಅಥವಾ IIಬಿ, ವರ್ಗ IIIಎ ಅಥವಾ IIIಬಿ ಗೆ ಸೇರಿದ ವ್ಯಕ್ತಿಗೆ ಸಂಬಂಧಿಸಿದಂತೆ ಮೂವತ್ತೆಂಟು ವರ್ಷಗಳು; ಮತ್ತು

ಸಿ) ಬೇರೆ ಯಾವುದೇ ಸಾಮಾನ್ಯ ವರ್ಗದ ವ್ಯಕ್ತಿಗೆ ಸಂಬಂಧಿಸಿದಂತೆ ಮೂವತ್ತೈದು ವರ್ಷಗಳು;

5. **ಆಯ್ಕೆ ವಿಧಾನ,-** (1) ಆಯ್ಕೆ ಸಮಿತಿಯು ಬಿಲ್ ಕಲೆಕ್ಟರ್ ಮತ್ತು ಕ್ಲರ್ಕ್ ಕಮ್ ಡಾಟಾ ಎಂಟ್ರಿ ಆಪರೇಟರ್ ಅಥವಾ ಡಾಟಾ ಎಂಟ್ರಿ ಆಪರೇಟರ್ ಅಥವಾ ವಾಟರ್ ಆಪರೇಟರ್, ಅಟೆಂಡೆಂಟ್ ಮತ್ತು ಕ್ಲೀನರ್ ವರ್ಗಗಳಿಗೆ ಸಂಬಂಧಿಸಿದಂತೆ ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಆಧರಿಸಿ ಅಧಿಸೂಚಿಸಿದ ಖಾಲಿ ಹುದ್ದೆಗಳಿಗೆ ಸಮನಾಗಿ ಆಯ್ಕೆ ಪಟ್ಟಿಯನ್ನು ತಯಾರಿಸತಕ್ಕದ್ದು.

(2) ಜಿಲ್ಲೆಯನ್ನು ರೋಸ್ಟರ್‌ಗಾಗಿ ಒಂದು ಯೂನಿಟ್ ಎಂದು ಪರಿಗಣಿಸಿ ರಾಜ್ಯ ಸರ್ಕಾರವು ಕಾಲ ಕಾಲಕ್ಕೆ ಹೊರಡಿಸಿರುವ ಮಾರ್ಗಸೂಚಿಗಳಿಗನುಸಾರ ನೇರ ನೇಮಕಾತಿ ಕೋಟಾದ ಮೀಸಲಾತಿ ನೀತಿಯನ್ನು ಅನುಸರಿಸತಕ್ಕದ್ದು.

(3) ಪ್ರತಿಯೊಂದು ವರ್ಗದ ಹುದ್ದೆಗಳಿಗೆ ರೋಸ್ಟರ್ ಬಿಂದುವನ್ನು ಪ್ರತ್ಯೇಕವಾಗಿ ನಿಗಧಿಪಡಿಸಲಾಗುತ್ತದೆ. ಇದಲ್ಲದೇ, ಖಾಲಿ ಹುದ್ದೆ ಸೃಷ್ಟಿಯಾದ ದಿನಾಂಕದ ಆಧಾರದ ಮೇಲೆ ರೋಸ್ಟರ್ ಬಿಂದು ನಿಗಧಿಪಡಿಸತಕ್ಕದ್ದು. ಎರಡಕ್ಕೂ ಹೆಚ್ಚು ಖಾಲಿ ಹುದ್ದೆಗಳು ಒಂದೇ ದಿನಾಂಕದಂದು ಉದ್ಭವಿಸಿದರೆ, ಕನ್ನಡ ವರ್ಣಮಾಲೆಯಂತೆ ಗ್ರಾಮ ಪಂಚಾಯಿತಿ ಹೆಸರುಗಳ ಆಧಾರದ ಮೇಲೆ ಮೀಸಲಾತಿ ನಿಗಧಿಯಾಗುತ್ತದೆ.



Scanned with CamScanner

(4) ಆಯ್ಕೆ ಸಮಿತಿಯು ಉಪನಿಯಮ (1) ರಲ್ಲಿ ಅಧಿಸೂಚಿಸಿದ ಖಾಲಿ ಹುದ್ದೆಗಳ ಶೇಕಡಾ ಹತ್ತರಷ್ಟನ್ನು ಮೀರದಂತೆ ಹೆಚ್ಚುವರಿ ಆಯ್ಕೆ ಪಟ್ಟಿಯನ್ನು ಸಹ ತಯಾರಿಸತಕ್ಕದ್ದು.

(5) ನೇಮಕಾತಿ ಪ್ರಾಧಿಕಾರವು ಆಯ್ಕೆ ಪಟ್ಟಿಯಲ್ಲಿ ಸೇರ್ಪಡೆಗೊಂಡ ಅಭ್ಯರ್ಥಿಗಳನ್ನು ಈ ಕೆಳಗಿನ ದಾಖಲೆಗಳನ್ನು ಪರಿಶೀಲಿಸಿದ ನಂತರ ಆಯ್ಕೆ ಪಟ್ಟಿಯಲ್ಲಿ ನೇಮಕ ಮಾಡತಕ್ಕದ್ದು.

a) ಜನನ ಪ್ರಮಾಣ ಪತ್ರ.

b) ಅರ್ಹತಾ ಪರೀಕ್ಷೆ ಅಂಕ ಪಟ್ಟಿಗಳು.

c) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಮೀಸಲಾತಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ತಹಸೀಲ್ದಾರ್ ನೀಡಿದ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳು.

d) ವೈದ್ಯಕೀಯವಾಗಿ ಅಂಗವಿಕಲ ಪ್ರಮಾಣ ಪತ್ರಗಳು.

e) ಸಕ್ಷಮ ಪ್ರಾಧಿಕಾರಗಳಿಂದ ಪಡೆದ ಮಾಜಿ ಸೈನಿಕರು, ಯೋಜನೆಯ ಸ್ಥಳಾಂತರಗೊಂಡ ವ್ಯಕ್ತಿಗಳ ಕುಟುಂಬದ ಸದಸ್ಯರು, ಕನ್ನಡ ಮಾಧ್ಯಮ ಮತ್ತು ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರಗಳು.

f) ಅಭ್ಯರ್ಥಿಗಳ ಪೂರ್ವಾಪರಗಳು.

ಆಯ್ಕೆ ಪಟ್ಟಿಯಲ್ಲಿ ಹೆಸರನ್ನು ಸೇರಿಸುವುದರಿಂದ ಅಭ್ಯರ್ಥಿಗಳು ಯಾವುದೇ ನೇಮಕಾತಿ ಹಕ್ಕು ಹೊಂದುವುದಿಲ್ಲ.

**6. ಬಡ್ತಿ ಮೂಲಕ ನೇಮಕಾತಿ,–** ಎಲ್ಲಾ ಬಡ್ತಿಗಳು ಒಟ್ಟುಗೂಡಿಸಿದ ಜೇಷ್ಠತೆಯ ಆಧಾರದ ಮೇಲೆ ಇರತಕ್ಕದ್ದು. ಬಿಲ್ ಕಲೆಕ್ಟರ್ ಮತ್ತು ಕ್ಲರ್ಕ್ ಕಮ್ ಡಾಟಾ ಎಂಟ್ರಿ ಆಪರೇಟರ್ ಹುದ್ದೆಗಳಿಗೆ ಬಡ್ತಿ ನೀಡುವ ಮುನ್ನ ಗ್ರಾಮ ಪಂಚಾಯಿತಿವಾರು ಒಟ್ಟುಗೂಡಿಸಿದ ಜೇಷ್ಠತಾ ಪಟ್ಟಿಯನ್ನು ಸಂಬಂಧಿಸಿದ ವರ್ಗದಲ್ಲಿ ಸಲ್ಲಿಸಿದ ಸೇವೆಯ ಅವಧಿಯ ಆಧಾರದ ಮೇಲೆ ಸಂಬಂಧಪಟ್ಟ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ತಯಾರಿಸತಕ್ಕದ್ದು.

**7. ಸೇವಾ ಷರತ್ತುಗಳು,–** ಈ ನಿಯಮಗಳ ಅಡಿಯಲ್ಲಿ ನೇಮಕಾತಿ ಹೊಂದಿದ ನೌಕರನಿಗೆ ಈ ಕೆಳಕಂಡ ಸೇವಾ ಷರತ್ತುಗಳು ಅನ್ವಯವಾಗತಕ್ಕದ್ದು, ಎಂದರೆ,–

(i) ನೌಕರನ ಸೇವಾ ಪುಸ್ತಕವನ್ನು ಸಂಬಂಧಿಸಿದ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ನಿರ್ವಹಿಸತಕ್ಕದ್ದು.

(ii) ನೌಕರರಿಗೆ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ವಾರ್ಷಿಕವಾಗಿ 10 ದಿನಗಳ ಸಾಂದರ್ಭಿಕ ರಜೆ ಮತ್ತು 2 ದಿನಗಳ ನಿರ್ಬಂಧಿತ ರಜೆ ಮತ್ತು 30 ದಿನಗಳ ಗಳಿಕೆ ರಜೆಯನ್ನು ಮಂಜೂರು ಮಾಡಲು ಸಕ್ಷಮ ಪ್ರಾಧಿಕಾರವಾಗಿರತಕ್ಕದ್ದು.

(iii) ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ವಿವಾಹಿತ ಮಹಿಳೆಯರಿಗೆ 180 ದಿನಗಳ ಪ್ರಸೂತಿ ರಜೆ ಮತ್ತು ಪುರುಷ ನೌಕರರಿಗೆ 15 ದಿನಗಳ ಪಿತೃತ್ವ ರಜೆಯನ್ನು ಮಂಜೂರು ಮಾಡಲು ಸಕ್ಷಮ ಪ್ರಾಧಿಕಾರವಾಗಿರತಕ್ಕದ್ದು.

(iv) ಗ್ರಾಮ ಪಂಚಾಯಿತಿಯ ಪ್ರತಿ ನೌಕರನು 60 ವರ್ಷ ವಯಸ್ಸನ್ನು ಪೂರೈಸಿದಾಗ ಸೇವೆಯಿಂದ ನಿವೃತ್ತಿ ಹೊಂದತಕ್ಕದ್ದು ; ಮತ್ತು

(v) ನೌಕರರು ಪ್ರತಿ ವರ್ಷಕ್ಕೆ 15 ದಿನಗಳ ವೇತನದಂತೆ ಒಟ್ಟು 20 ತಿಂಗಳ ವೇತನ ಮೀರದಂತೆ ಮರಣ ಮತ್ತು ನಿವೃತ್ತಿ ಉಪದಾನ ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.



Scanned with CamScanner

8. **ಶಿಸ್ತು ಪ್ರಾಧಿಕಾರ,**– ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 62(ಡಿ) ಮತ್ತು ಪ್ರಕರಣ 113 ರಲ್ಲಿ ಏನೇ ಒಳಗೊಂಡಿದ್ದರೂ, ತಪ್ಪು ಮಾಡಿದ ನೌಕರರ ವಿರುದ್ಧ ಶಿಸ್ತು ಕ್ರಮವನ್ನು ಪ್ರಾರಂಭಿಸತಕ್ಕದ್ದು. (11)

(ಅ) ಗ್ರಾಮ ಪಂಚಾಯಿತಿಯು ತಪ್ಪು ಮಾಡಿದ ನೌಕರರ ವಿರುದ್ಧ ಶಿಸ್ತು ಕ್ರಮವನ್ನು ಪ್ರಾರಂಭಿಸುವುದು ಮತ್ತು "ದಂಡ ಅಥವಾ ವೇತನ ಬಡ್ತಿಯನ್ನು ತಡೆ ಹಿಡಿಯುವುದು" ವಿಧಿಸಲು ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ಶಿಸ್ತು ಪ್ರಾಧಿಕಾರಕ್ಕೆ ಅಧಿಕಾರ ನೀಡಲಾಗುವುದು.

(ಆ)ಗ್ರಾಮ ಪಂಚಾಯಿತಿಯ ಅಧ್ಯಕ್ಷನಿಗೆ ಗ್ರಾಮ ಪಂಚಾಯಿತಿಯ ನೌಕರರನ್ನು ಅಮಾನತುಗೊಳಿಸುವುದಕ್ಕೆ ಅಧಿಕಾರ ನೀಡಲಾಗುತ್ತದೆ. ಅಲ್ಲಿ ಅವನ ವಿರುದ್ಧ ಶಿಸ್ತು ಕ್ರಮವನ್ನು ಆಲೋಚಿಸುವುದು ಅಥವಾ ಬಾಕಿ ಇರಿಸುವುದು ಅಥವಾ ಯಾವುದೇ ಕ್ರಿಮಿನಲ್ ಅಪರಾಧಕ್ಕೆ ಸಂಬಂಧಿಸಿದಂತೆ ಆತನ ವಿರುದ್ಧದ ಪ್ರಕರಣವು ತನಿಖೆ ಅಥವಾ ವಿಚಾರಣೆಯಲ್ಲಿದ್ದರೆ.

(ಇ) ನೌಕರನ ಶ್ರೇಣಿಯನ್ನು ಕಡಿಮೆ ಮಾಡಲು, ಸೇವೆಯಿಂದ ತೆಗೆದುಹಾಕಲು ಅಥವಾ ವಜಾಗೊಳಿಸಲು ಗ್ರಾಮ ಪಂಚಾಯಿತಿಗೆ ಅಧಿಕಾರವಿದೆ.

(2) **ಅನುಸರಿಸಬೇಕಾದ ಕಾರ್ಯವಿಧಾನ** :- 1) ಶಿಸ್ತು ಪ್ರಾಧಿಕಾರವು ತಾನು ಸ್ವತಃ ಅಥವಾ ಇತರರ ಮುಖಾಂತರ;

(i) ನೌಕರನು ಮಾಡಿರುವ ತಪ್ಪು ನಡತೆ ಅಥವಾ ಕೆಟ್ಟ ನಡೆಯನ್ನು ನಿರ್ದಿಷ್ಟವಾದ ಆರೋಪವನ್ನಾಗಿ ತಯಾರಿಸುವುದು.

ii) ಪ್ರತಿ ಆರೋಪಗಳಿಗೆ ಅಥವಾ ಆರೋಪಗಳನ್ನು ಬೆಂಬಲಿಸುವ ಅಥವಾ ಪ್ರತಿಯೊಂದು ದುಷ್ಕೃತ್ಯದ ಆರೋಪಗಳಿಗೆ.

(ಎ)ನೌಕರನು ಮಾಡಿದ ಯಾವುದೇ ನಿವೇದನೆ ಅಥವಾ ತಪ್ಪೊಪ್ಪಿಗೆಯನ್ನು ಒಳಗೊಂಡಂತೆ ಎಲ್ಲಾ ಸಂಬಂಧಿತ ಸಂಗತಿಗಳ ಹೇಳಿಕೆ ದಾಖಲಿಸಬಹುದಾಗಿದೆ.

(ಬಿ) ದೋಷಾರೋಪಗಳಿಗೆ (ಚಾರ್ಜ್‌ಗಳಿಗೆ) ಅವಶ್ಯಕವಾದ ದಾಖಲೆ ಮತ್ತು ಸಾಕ್ಷಿಗಳ ಪಟ್ಟಿಗಳನ್ನು ಬಳಸಿಕೊಳ್ಳಬಹುದಾಗಿದೆ.

2) ಶಿಸ್ತು ಪ್ರಾಧಿಕಾರವು ನೌಕರನಿಗೆ ದೋಷಾರೋಪದ (ಚಾರ್ಜ್) ಪಟ್ಟಿಯನ್ನು ಹಾಗೂ ದುಷ್ಕೃತ್ಯ ಅಥವಾ ದುರುಪಯೋಗದ ಆರೋಪಗಳ ಹೇಳಿಕೆ ಮತ್ತು ಪ್ರತಿ ದೋಷಾರೋಪದ (ಚಾರ್ಜ್) ಪಟ್ಟಿಯಲ್ಲಿ ಪ್ರಸ್ತಾಪಿಸುವ ದಾಖಲೆ ಮತ್ತು ಸಾಕ್ಷಿಗಳ ಪಟ್ಟಿಯನ್ನು ಜಾರಿಗೊಳಿಸುವುದು ಅಥವಾ ಜಾರಿಗೊಳಿಸಲು ಕ್ರಮ ವಹಿಸುವುದು ಹಾಗೂ ನೌಕರನು ನಿಗಧಿತ ಸಮಯದೊಳಗೆ ರಕ್ಷಣಾ ಹೇಳಿಕೆ ಸಲ್ಲಿಸಲು ಹಾಗೂ ವಿಚಾರಣೆ ನಡೆಸಲು ಅಗತ್ಯತೆಯ ಬಗ್ಗೆ ತಿಳಿಸುವಂತೆ ಸೂಚಿಸುವುದು.

3) ಎ) ಶಿಸ್ತು ಪ್ರಾಧಿಕಾರವು ಆರೋಪಿ ನೌಕರರ ರಕ್ಷಣಾ ಹೇಳಿಕೆಯನ್ನು ಸ್ವೀಕರಿಸಿದ ನಂತರ ತಾವೇ ವಿಚಾರಣೆಯನ್ನು ಯಾವೊಂದು ಆರೋಪಗಳನ್ನು ಒಪ್ಪಿರುವುದಿಲ್ಲವೋ ಅಂತಹ ಆರೋಪಗಳಿಗೆ ಸಂಬಂಧಿಸಿದಂತೆ ಮಾಡಬಹುದು ಅಥವಾ ತಮಗೆ ಅಗತ್ಯವೆಂದು ಕಂಡು ಬಂದರೆ ಮತ್ತೊಬ್ಬ ವಿಚಾರಣಾಧಿಕಾರಿಯನ್ನು



Scanned with CamScanner

ನೇಮಿಸಬಹುದು. ಯಾವುದೇ ಪ್ರಕರಣದಲ್ಲಿ ಆರೋಪಿ ನೌಕರನು ತಪ್ಪು ಒಪ್ಪಿಗೆ ಹೇಳಿಕೆಯನ್ನು ನೀಡಿದ್ದಲ್ಲಿ ಅಥವಾ ಆರೋಪಗಳನ್ನು ಒಪ್ಪಿಕೊಂಡಿದ್ದರೋ ಅಂತಹ ಆರೋಪಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಅಥವಾ ಪ್ರತಿಯೊಂದು ಆರೋಪಗಳಿಗೆ ತಮ್ಮ ತೀರ್ಮಾನವನ್ನು ದಾಖಲಿಸಿ ಮೇಲಿನ ಉಪ ನಿಯಮ (1) ರಂತೆ ಕ್ರಮವಹಿಸತಕ್ಕದ್ದು.

2) ನೌಕರನಿಂದ ಯಾವುದೇ ಲಿಖಿತ ಹೇಳಿಕೆಯು ಸಲ್ಲಿಕೆಯಾಗಿದ್ದರೆ, ಶಿಸ್ತು ಪ್ರಾಧಿಕಾರವು ದೋಷಾರೋಪಣಾ ಪಟ್ಟಿಗೆ ಸಂಬಂಧಿಸಿದಂತೆ ತಾನೇ ವಿಚಾರಣೆಯನ್ನು ನಡೆಸಬಹುದು ಅಥವಾ ವಿಚಾರಣಾಧಿಕಾರಿಯನ್ನು ನೇಮಿಸಬಹುದು.

4) ವಿಚಾರಣಾ ಪ್ರಾಧಿಕಾರವು ಆರೋಪಿ ನೌಕರನಿಗೆ ಸಾಕಷ್ಟು ಅವಕಾಶಗಳನ್ನು ನೀಡಿ, ತಾನು ಒಪ್ಪಿಕೊಳ್ಳದಿರುವ ಆರೋಪಗಳಿಗೆ ಸಂಬಂಧಿಸಿದಂತೆ ವಿಚಾರಣೆಯನ್ನು ನಡೆಸತಕ್ಕದ್ದು. ವಿಚಾರಣಾ ಪ್ರಾಧಿಕಾರವು ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ಸಾಕ್ಷಿಗಳ ಹೇಳಿಕೆಯನ್ನು ಪಡೆಯುವುದು ಮತ್ತು ನೌಕರನಿಗೆ ಪಾಟೀ ಸವಾಲ್ ಮಾಡಲು ಅವಕಾಶ ನೀಡುವುದು. ವಿಚಾರಣೆಯ ಆಧಾರದ ಮೇಲೆ ವಿಚಾರಣಾ ಪ್ರಾಧಿಕಾರವು ವಿಚಾರಣಾ ವರದಿಯನ್ನು ತಯಾರಿಸತಕ್ಕದ್ದು. ಅದರಲ್ಲಿ ಸ್ಪಷ್ಟವಾಗಿ ಆರೋಪವು ಸಾಬೀತಾಗಿದೆಯೋ ಅಥವಾ ಇಲ್ಲವೇ ಎಂಬುದರ ಬಗ್ಗೆ ಶಿಸ್ತು ಪ್ರಾಧಿಕಾರಕ್ಕೆ ವಿಚಾರಣಾ ವರದಿಯನ್ನು ಸಲ್ಲಿಸತಕ್ಕದ್ದು. ಶಿಸ್ತು ಪ್ರಾಧಿಕಾರವು ತಾನೇ ವಿಚಾರಣಾ ಪ್ರಾಧಿಕಾರವಾದರೆ ಇದೇ ಪದ್ಧತಿಯನ್ನು ಅನುಸರಿಸಿ ವಿಚಾರಣಾ ವರದಿಯನ್ನು ಸಿದ್ಧಪಡಿಸತಕ್ಕದ್ದು.

3) ವಿಚಾರಣಾ ವರದಿಯ ಮೇಲೆ ಕ್ರಮ:-

ಎ) ಶಿಸ್ತು ಪ್ರಾಧಿಕಾರವು ವಿಚಾರಣಾ ವರದಿಯನ್ನು ಸ್ವೀಕರಿಸಿದ ನಂತರ ಲಭ್ಯವಿರುವ ದಾಖಲೆಗಳು, ಸಾಕ್ಷಿಗಳ ಹೇಳಿಕೆಗಳು ಮತ್ತು ತನ್ನ ಸಕಾರಣಗಳನ್ನು ಲಿಖಿತವಾಗಿ ದಾಖಲಿಸಿದಂತೆ ತನ್ನ ಅಭಿಪ್ರಾಯದಲ್ಲಿ ವಿಚಾರಣಾ ವರದಿಯನ್ನು ಒಪ್ಪಲಾಗಿದೆಯೇ ಅಥವಾ ತಿರಸ್ಕರಿಸಲಾಗಿದೆಯೇ ಅಥವಾ ವರದಿಯನ್ನು ಮತ್ತೆ ಮುಂದಿನ ವಿಚಾರಣೆಗಾಗಿ ವಿಚಾರಣಾಧಿಕಾರಿಗೆ ಹಿಂದಿರುಗಿಸಲಾಗಿದೆಯೇ ಎಂದು ಸ್ಪಷ್ಟವಾಗಿ ದಾಖಲಿಸತಕ್ಕದ್ದು.

ಬಿ) ದೋಷಾರೋಪಣೆಯು ಸಾಬೀತಾಗಿದ್ದರೆ ಮತ್ತು ಶಿಸ್ತು ಪ್ರಾಧಿಕಾರವು ಅಂತಹ ವಿಚಾರಣಾ ವರದಿಯನ್ನು ಅಂಗೀಕರಿಸಿದ್ದರೆ, ಆರೋಪಿ ನೌಕರನಿಗೆ ಎರಡನೇ ಕಾರಣ ಕೇಳುವ ನೋಟೀಸನ್ನು ಸಾಕಷ್ಟು ಕಾಲಾವಕಾಶದೊಂದಿಗೆ ತನ್ನ ವಿವರಣೆಯನ್ನು ನೀಡಲು ತಿಳಿಸಿ ಜಾರಿ ಮಾಡತಕ್ಕದ್ದು. ವಿವರಣೆಯನ್ನು ಸ್ವೀಕರಿಸಿದ ನಂತರ ಅಥವಾ ಆರೋಪಿ ನೌಕರನು ನಿಗದಿಪಡಿಸಿದ ಅವಧಿಯೊಳಗೆ ವಿವರಣೆ ನೀಡಲು ವಿಫಲರಾದ ಸಂದರ್ಭದಲ್ಲಿ ತನ್ನ ತೀರ್ಮಾನವನ್ನು ಲಭ್ಯವಿರುವ ಆಧಾರಗಳ ಮೇಲೆ ತೆಗೆದುಕೊಳ್ಳತಕ್ಕದ್ದು.

ಸಿ) ಶಿಸ್ತು ಪ್ರಾಧಿಕಾರವು ದೋಷಾರೋಪಣೆಯು ಸಾಬೀತಾಗಿದೆಯೆಂಬ ತೀರ್ಮಾನಕ್ಕೆ ಬಂದು ಮತ್ತು ಅಂತಹ ಆರೋಪಗಳು ಗಂಭೀರ ಸ್ವರೂಪವಲ್ಲದ ರೀತಿಯದ್ದು ಎಂದು ಭಾವಿಸಿದರೆ ತಾನೇ ದಂಡ (Fine) ಅಥವಾ ನೌಕರನಿಗೆ ವೇತನ ಬಡ್ತಿಯನ್ನು ತಡೆ ಹಿಡಿಯುವ ದಂಡನೆಯನ್ನು ವಿಧಿಸಬಹುದು. ಶಿಸ್ತು ಪ್ರಾಧಿಕಾರದ ಅಭಿಪ್ರಾಯದಲ್ಲಿ ಮಾಡಿರುವಂತಹ ದೋಷಾರೋಪಣೆಯು ಗಂಭೀರ ಸ್ವರೂಪದೆಂಬ ತೀರ್ಮಾನಕ್ಕೆ ಬಂದರೆ ಅಂತಹ ದೋಷಾರೋಪಣೆಗಳ ಬಗ್ಗೆ ಒಂದು ಸ್ವಯಂವೇದ್ಯ ಟಿಪ್ಪಣಿಯನ್ನು ವಿಧಿಸಬಹುದಾದ ದಂಡನೆಯ ಬಗ್ಗೆ ತನ್ನ ಶಿಫಾರಸ್ಸಿನೊಂದಿಗೆ ಮುಂದಿನ ಮುಂದಿನ ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಮಂಡಿಸತಕ್ಕದ್ದು. ಗ್ರಾಮ ಪಂಚಾಯಿತಿ ಈ ವಿಚಾರದ ಬಗ್ಗೆ ಚರ್ಚಿಸಿ ತಮ್ಮ ಸಕಾರಣಗಳನ್ನು ನಡವಳಿಯಲ್ಲಿ ದಾಖಲಿಸಿ ನೌಕರನನ್ನು ಕೆಲಸದಿಂದ ತೆಗೆಯುವ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳತಕ್ಕದ್ದು.

ಡಿ) ಶಿಸ್ತು ಪ್ರಾಧಿಕಾರವು ಗ್ರಾಮ ಪಂಚಾಯಿತಿಯ ತೀರ್ಮಾನವನ್ನು ಜಾರಿ ಮಾಡತಕ್ಕದ್ದು.

4) ಇತರೆ ತನಿಖಾ ಸಂಸ್ಥೆಗಳ ಶಿಫಾರಸ್ಸಿನ ಮೇಲೆ ಕ್ರಮ:- ಸಾರ್ವಜನಿಕ ದೂರುಗಳ ಆಧಾರದ ಮೇಲೆ ಲೋಕಾಯುಕ್ತ ಅಥವಾ ಭ್ರಷ್ಟಾಚಾರ ನಿಗ್ರಹ ದಳವು ತನಿಖೆಯನ್ನು ಕೈಗೊಂಡು ಗ್ರಾಮ ಪಂಚಾಯಿತಿ ನೌಕರನ ವಿರುದ್ಧ ಕ್ರಮಕ್ಕೆ ಶಿಫಾರಸ್ಸು ಮಾಡಿದರೆ;



Scanned with CamScanner

i) [illegible] ಸ್ವೀಕರಿಸಿದ್ದು ಎಂದಾದರೆ ಶಿಸ್ತು ಪ್ರಾಧಿಕಾರವು ಉಪ ನಿಯಮ 8(2) ರಡಿಯಲ್ಲಿ ಕ್ರಮವನ್ನು ಪ್ರಾರಂಭಿಸತಕ್ಕದ್ದು.

ii) ಲೋಕಾಯುಕ್ತವು ಅಂತಹ ನೌಕರನ ವಿರುದ್ಧ ಮಾಡಲಾಗಿರುವ ಆಪಾದನೆ ಬಗ್ಗೆ ವಿಚಾರಣೆಯನ್ನು ನಡೆಸಲು ಅನುಮತಿಯನ್ನು ಕೋರಬಹುದು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ರವರು ಲಭ್ಯವಿರುವ ದಾಖಲೆ ಮತ್ತು ಮಾಡಲಾಗಿರುವ ಆರೋಪಗಳನ್ನು ಪರಿಶೀಲಿಸಿದ ನಂತರ ಮೇಲ್ನೋಟಕ್ಕೆ ಅಂತಹ ಆರೋಪಗಳು ಸತ್ಯವೆಂಬ ಅಭಿಪ್ರಾಯಕ್ಕೆ ಬಂದರೆ ಅಂತಹ ಆರೋಪಗಳ ಮೇಲೆ ವಿಚಾರಣೆಯನ್ನು ಕೈಗೊಳ್ಳಲು ಲೋಕಾಯುಕ್ತಕ್ಕೆ ಅನುಮತಿಸಬಹುದು.

iii) ವಿಚಾರಣೆಯ ನಂತರ ಲೋಕಾಯುಕ್ತವು ಮಾಡುವ ಶಿಫಾರಸ್ಸುಗಳನ್ನು ಅಂಗೀಕರಿಸುವುದು ಗ್ರಾಮ ಪಂಚಾಯಿತಿಗಳಿಗೆ ಕಡ್ಡಾಯವಾಗಿರುತ್ತದೆ.

5. **ಮೇಲ್ಮನವಿ** :-

**i)** ಈ ನಿಯಮಗಳ ಉಪಬಂಧ 8(1)(ಎ) ಅಡಿಯಲ್ಲಿ ಹೊರಡಿಸಿದ ಆದೇಶಗಳಿಗೆ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಮೇಲ್ಮನವಿ ಪ್ರಾಧಿಕಾರಿಗಳಾಗಿರುತ್ತಾರೆ.

**ii)** ಈ ನಿಯಮಗಳ ಉಪಬಂಧ 8(1)(ಬಿ) ಅಡಿಯಲ್ಲಿ ಹೊರಡಿಸಿದ ಆದೇಶಗಳಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ರವರು ಮೇಲ್ಮನವಿ ಪ್ರಾಧಿಕಾರಿಗಳಾಗಿರುತ್ತಾರೆ.

**9. ಅನುಕಂಪದ ಆಧಾರ ಮೇಲೆ ನೇಮಕಾತಿಗಳು.**- ಗ್ರಾಮ ಪಂಚಾಯಿತಿಯ ನೌಕರನು ಆಕಾಲಿಕ ಮರಣಕ್ಕೆ ತುತ್ತಾದ ಸಂಧರ್ಭದಲ್ಲಿ ಮೃತ ನೌಕರನ ಅವಲಂಬಿತರು ಮುಂದಿನ ಷರತ್ತುಗಳಿಗೊಳಪಟ್ಟು ನೇಮಕಾತಿಗೆ ಅರ್ಹರಾಗಿರುತ್ತಾರೆ :

1. ನೌಕರನ ಸಾವು ಸಂಭವಿಸಿದ ದಿನಾಂಕದಿಂದ ಒಂದು ವರ್ಷದೊಳಗಾಗಿ ಅರ್ಹ ವ್ಯಕ್ತಿಯು ಹುದ್ದೆಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.
2. **ನೇಮಕಾತಿಗೆ ಅರ್ಹತೆ :**
   1. ಈ ನಿಯಮಗಳಡಿಯಲ್ಲಿ ನೇಮಕಾತಿಗಳನ್ನು ತನ್ನ ಹಕ್ಕು ಎಂದು ಭಾವಿಸತಕ್ಕದ್ದಲ್ಲ ಮತ್ತು ಅದನ್ನು ಸಹಜವಾಗಿ ನೀಡಲಾಗುವುದಿಲ್ಲ.
   2. ಈ ನಿಯಮಗಳಡಿಯಲ್ಲಿ ನೇಮಕಾತಿಯು ಮೃತ ಗ್ರಾಮ ಪಂಚಾಯಿತಿ ನೌಕರನ ಅವಲಂಬಿತರಿಗೆ ಈ ಕೆಳಕಂಡ ಅದ್ಯತೆಯ ಆಧಾರದ ಮೇಲೆ ನೀಡಲಾಗುವುದು.

      **i)** ಮೃತನು ಗ್ರಾಮ ಪಂಚಾಯಿತಿಯ ಪುರುಷ ನೌಕರನಾಗಿದ್ದಲ್ಲಿ :

      ಎ) ವಿಧವೆ;

      ಬಿ) ಮಗ, ವಿಧವೆಯು ನೇಮಕಾತಿಗೆ ಅರ್ಹತೆ ಇಲ್ಲದಿದ್ದರೆ ಅಥವಾ ಯಾವುದೇ ಸಕಾರಣಗಳಿಗೆ ಅವಳು ನೇಮಕಾತಿಯನ್ನು ಸ್ವೀಕರಿಸಲು ಸಿದ್ಧರಿಲ್ಲದಿದ್ದರೆ ;

      ಸಿ) ಅವಿವಾಹಿತ ಮಗಳು, ವಿಧವೆ ಅಥವಾ ಮಗ ಇಬ್ಬರೂ ನೇಮಕಾತಿಗೆ ಅರ್ಹತೆ ಇಲ್ಲದಿದ್ದರೆ ಅಥವಾ ಯಾವುದೇ ಸಕಾರಣಗಳಿಗೆ ಅವರು ನೇಮಕಾತಿಯನ್ನು ಸ್ವೀಕರಿಸಲು ಸಿದ್ಧರಿಲ್ಲದಿದ್ದರೆ :

      ಡಿ) ವಿಧವೆಯಾಗಿರುವ ಮಗಳು, ವಿಧವೆ, ಮಗ ಅಥವಾ ಅವಿವಾಹಿತ ಮಗಳು ನೇಮಕಾತಿಗೆ ಅರ್ಹತೆ ಇಲ್ಲದಿದ್ದರೆ ಅಥವಾ ಯಾವುದೇ ಸಕಾರಣಗಳಿಗೆ ಅವರು ನೇಮಕಾತಿಯನ್ನು ಸ್ವೀಕರಿಸಲು ಸಿದ್ಧರಿಲ್ಲದಿದ್ದರೆ ;



Scanned with CamScanner

**(ia)** ಮದುವೆಯಾಗದ ಪುರುಷ ಗ್ರಾಮ ಪಂಚಾಯಿತಿಯ ನೌಕರನು ಮೃತನಾದರೆ :

ಎ) ಅವಿವಾಹಿತ ಸಹೋದರ.

ಬಿ) ಅವಿವಾಹಿತ ಅಥವಾ ವಿಧವೆಯಾಗಿರುವ ಸಹೋದರಿ.

ಮೃತ ನೌಕರನ ಮೇಲೆ ತಮ್ಮ ಬದುಕಿಗಾಗಿ ಅವಲಂಬಿತರಾಗಿರುವವರು.

**(ii)** ಮೃತ ಗ್ರಾಮ ಪಂಚಾಯಿತಿ ನೌಕರರು ಮಹಿಳೆಯಾಗಿದ್ದರೆ :

ಎ) ಮಗ :

ಬಿ) ಅವಿವಾಹಿತ ಮಗಳು. ಮಗ ನೇಮಕಾತಿಗೆ ಅರ್ಹತೆ ಇಲ್ಲದಿದ್ದರೆ ಅಥವಾ ಯಾವುದೇ ಸಕಾರಣಗಳಿಗೆ ಅವನು ನೇಮಕಾತಿಯನ್ನು ಸ್ವೀಕರಿಸಲು ಸಿದ್ಧರಿಲ್ಲದಿದ್ದರೆ:

ಸಿ) ವಿದುರ, ಮಗ ಅಥವಾ ಮಗಳು ಇಬ್ಬರೂ ನೇಮಕಾತಿಗೆ ಅರ್ಹತೆ ಇಲ್ಲದಿದ್ದರೆ ಅಥವಾ ಯಾವುದೇ ಸಕಾರಣಗಳಿಗೆ ಅವರು ನೇಮಕಾತಿಯನ್ನು ಸ್ವೀಕರಿಸಲು ಸಿದ್ಧರಿಲ್ಲದಿದ್ದರೆ.

ಡಿ) ವಿಧವೆಯಾಗಿರುವ ಮಗಳು, ವಿದುರ, ಮಗ ಅಥವಾ ಅವಿವಾಹಿತ ಮಗಳು ನೇಮಕಾತಿಗೆ ಅರ್ಹತೆ ಇಲ್ಲದಿದ್ದರೆ ಅಥವಾ ಯಾವುದೇ ಸಕಾರಣಗಳಿಗೆ ಅವರು ನೇಮಕಾತಿಯನ್ನು ಸ್ವೀಕರಿಸಲು ಸಿದ್ಧರಿಲ್ಲದಿದ್ದರೆ.

**(iia)** ಮದುವೆಯಾಗದ ಮಹಿಳಾ ಗ್ರಾಮ ಪಂಚಾಯಿತಿಯ ನೌಕರಳು ಮೃತಳಾದರೆ :

ಎ) ಅವಿವಾಹಿತ ಸಹೋದರ;

ಬಿ) ಅವಿವಾಹಿತ ಅಥವಾ ವಿದುರಳಾಗಿರುವ ಸಹೋದರಿ;

ಮೃತ ನೌಕರಳ ಮೇಲೆ ತಮ್ಮ ಬದುಕಿಗಾಗಿ ಅವಲಂಬಿತರಾಗಿರುವವರು.

**(iii)** ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಆ ವ್ಯಕ್ತಿಯ ವಿರುದ್ಧ ಮೃತ ಗ್ರಾಮ ಪಂಚಾಯಿತಿ ನೌಕರನ ಕೊಲೆ ಮಾಡಿರುವ ಅಥವಾ ಅಂತಹ ದುಷ್ಕೃತ್ಯವನ್ನು ನಡೆಸಲು ಕುಮ್ಮಕ್ಕು ನೀಡಿರುವ ಆಧಾರದ ಮೇಲೆ ಯಾವುದೇ ಕ್ರಿಮಿನಲ್ ಮೊಕದ್ದಮೆ ಹೂಡಿ ತನಿಖೆ ಅಥವಾ ವಿಚಾರಣೆ ನಡೆಯುತ್ತಿದ್ದರೆ ಅಂತಹ ವ್ಯಕ್ತಿಗಳು ಈ ನಿಯಮಗಳಡಿಯಲ್ಲಿ ನೇಮಕಾತಿ ಆಗಲಿ ಅರ್ಹರಿರುವುದಿಲ್ಲ.

3. ವಯೋಮಿತಿ : ಉಪಬಂಧ 4(6) ಕಲ್ಪಿಸಿರುವಂತೆ;
ಆದರೆ ವಿಧವೆ ಅಥವಾ ವಿಕಲಚೇತನ ವ್ಯಕ್ತಿಗಳಿಗೆ 10 ವರ್ಷಗಳ ಸಡಿಲಿಕೆಯನ್ನು ನೀಡಲಾಗಿದೆ.

4. ನೇಮಕಾತಿಗೆ ಅರ್ಹತೆ : ಬಿಲ್ ಕಲೆಕ್ಟರ್, ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ ಮತ್ತು ಡಾಟಾ ಎಂಟ್ರಿ ಆಪರೇಟರ್‌ಗಳಿಗೆ ಕನಿಷ್ಟ ವಿದ್ಯಾರ್ಹತೆಯು ಉಪನಿಯಮ 3ರ ಅನುಸೂಚಿ I ನೇರ ನೇಮಕಾತಿಗೆ ನಿಗಧಿಪಡಿಸಿರುವಂತೆ. ನೀರು ಸರಬರಾಜುದಾರರು, ಅಟೆಂಡೆಂಟ್ ಮತ್ತು ಸ್ವಚ್ಚತಾಗಾರರು ಉಪನಿಯಮ 3ರ ಅನುಸೂಚಿ I ಅನ್ವಯಿಸುವುದಿಲ್ಲ.

5. ಖಾಲಿಯಿರುವ ಹುದ್ದೆಗಳಿಗೆ ಮಾತ್ರ ಅರ್ಜಿಯನ್ನು ಪರಿಗಣಿಸಲಾಗುವುದು. ಆದರೆ ಉಪನಿಯಮ 9(4) ರಲ್ಲಿ ನಿಗಧಿಪಡಿಸಿರುವ ಕನಿಷ್ಠ ವಿದ್ಯಾರ್ಹತೆಯನ್ನು ಹೊಂದಿರಬೇಕು.

Scanned with CamScanner

(7)

10. ಹಿಂದಿನ ಅಧಿಕೃತ ಜ್ಞಾಪನ ಮತ್ತು ಸರ್ಕಾರಿ ಆದೇಶಗಳನ್ನು ಹಿಂಪಡೆಯುವುದು.- ಸರ್ಕಾರದ ಆದೇಶ ಸಂಖ್ಯೆ – ಆರ್‌ಡಿಪಿ 102 ಪಿಇಎಲ್ 1990, ದಿನಾಂಕ: 10.01.1994, ಅಧಿಕೃತ ಜ್ಞಾಪನ ಸಂಖ್ಯೆ ಗ್ರಾಅಪ 67 ಗ್ರಾಪಂಸಿ 2006, ದಿನಾಂಕ: 04.01.2008, ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 22 ಗ್ರಾಪಂಸಿ 2014, ದಿನಾಂಕ: 10.09.2014 ಮತ್ತು ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 103 ಗ್ರಾಪಂಸಿ 2016, ದಿನಾಂಕ: 02.11.2017 ಅಥವಾ ಷೆಡ್ಯೂಲ್‌ನಲ್ಲಿ ನಿರ್ದಿಷ್ಟಪಡಿಸಿರುವ ಹುದ್ದೆಗಳಿಗೆ ಹೊರಡಿಸಿರುವ ಇತರೆ ಯಾವುದೇ ನಿಯಮಗಳು ಮತ್ತು ಸಿಬ್ಬಂದಿ ವರ್ಗದ ಮಾದರಿ ಮತ್ತು ನೇಮಕಾತಿ ವಿಧಾನಗಳ ಬಗೆಗಿನ ಯಾವುದೇ ಆದೇಶ ಇವುಗಳನ್ನು ಈ ಮೂಲಕ ಹಿಂಪಡೆಯಲಾಗಿದೆ.

ಪರಂತು ಇಂತಹ ಹಿಂಪಡೆಯುವಿಕೆ ಅಥವಾ ರದ್ದಿಯಾತಿಯು ಈ ಕೆಳಗಿನವುಗಳಿಗೆ ಬಾಧಕವಾಗತಕ್ಕದ್ದಲ್ಲ.

(i) ಮೇಲಿನ ಅಧಿಕೃತ ಜ್ಞಾಪನ ಮತ್ತು ಸರ್ಕಾರಿ ಆದೇಶಗಳಡಿ ಹಿಂದೆ ಮಾಡಲಾದ ಕಾರ್ಯಕ್ರಿಯೆ ಅಥವಾ ಅದರ ಮೂಲಕ ಬಾಧೆಗೊಳಪಟ್ಟ ; ಅಥವಾ

(ii) ಅಧಿಕೃತ ಜ್ಞಾಪನ ಮತ್ತು ಸರ್ಕಾರಿ ಆದೇಶಗಳಡಿ ಗಳಿಸಿದ, ಯಾವುದೇ ಹಕ್ಕು, ಸವಲತ್ತು, ಬಾಧ್ಯತೆ, ಅಥವಾ ಸ್ವಾಧೀನ ಪಡಿಸಿಕೊಂಡ, ಸಂಭವಿಸಿದ, ಉಂಟಾದ ಹೊಣೆಗಾರಿಕೆ.

## ಷೆಡ್ಯೂಲ್-I

(ನಿಯಮ 2 ಮತ್ತು 3ನ್ನು ನೋಡುವುದು)

| ಕ್ರಸಂ | ಸಿಬ್ಬಂದಿ ವರ್ಗ | ನೇಮಕಾತಿ ವಿಧಾನ | ವಿದ್ಯಾರ್ಹತೆ |
|---|---|---|---|
| 1 | 2 | 3 | 4 |
| 1 | ಕರ ವಸೂಲಿಗಾರ ಮತ್ತು ಕ್ಲರ್ಕ್ ಕಮ್ ಡಾಟಾ ಎಂಟ್ರಿ ಆಪರೇಟರ್. | ವಾಟರ್ ಆಪರೇಟರ್/ಅಟೆಂಡೆಂಟ್/ಕ್ಲೀನರ್ಸ್ ವೃಂದದಿಂದ ಒಟ್ಟುಗೂಡಿಸಿದ ಜೇಷ್ಠತೆ ಆಧಾರದ ಮೇಲೆ ಮುಂಬಡ್ತಿಯ ಮೂಲಕ;<br><br>ಜೇಷ್ಠತೆಯನ್ನು ಸಂಬಂಧಿಸಿದ ವೃಂದಗಳಲ್ಲಿ ಸಲ್ಲಿಸಿದ ಸೇವೆಯ ಅವಧಿಯ ಮೇಲೆ ನಿರ್ಧರಿಸುವುದು.<br><br>ಪರಂತು, ಮುಂಬಡ್ತಿಗಾಗಿ ಅರ್ಹ ವ್ಯಕ್ತಿಗಳು ಲಭ್ಯವಿಲ್ಲದಿದ್ದಲ್ಲಿ ಮೆರಿಟ್ ಆಧಾರದ ಮೇಲೆ ನೇರ ನೇಮಕಾತಿ ಮೂಲಕ ಭರ್ತಿ ಮಾಡುವುದು. | **ಬಡ್ತಿಗಾಗಿ:**<br><br>(1)ಕನ್ನಡವನ್ನು ಒಂದು ವಿಷಯವನ್ನಾಗಿ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.<br><br>(2) ವಾಟರ್ ಆಪರೇಟರ್/ಅಟೆಂಡೆಂಟ್/ಕ್ಲೀನರ್ಸ್ ಹುದ್ದೆಯಲ್ಲಿ 5 ವರ್ಷಗಳಿಗೆ ಕಡಿಮೆ ಇಲ್ಲದ ಸೇವೆ ಸಲ್ಲಿಸಿರಬೇಕು.<br><br>**ನೇರ ನೇಮಕಾತಿಗಾಗಿ:**<br><br>(1) ಕನ್ನಡವನ್ನು ಒಂದು ಭಾಷೆಯನ್ನಾಗಿ ಪಿ.ಯು.ಸಿ ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ತೇರ್ಗಡೆ ಹೊಂದಿರಬೇಕು.<br><br>(2) ಕಂಪ್ಯೂಟರ್ ತರಬೇತಿ ಕೋರ್ಸ್‌ನಲ್ಲಿ ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಮಾನ್ಯತೆ |



Scanned with CamScanner

| | | | |
|---|---|---|---|
| | | | ಪಡೆದ ಯಾವುದೇ ಸಂಸ್ಥೆಯಿಂದ ಮೂರು ತಿಂಗಳ ತರಬೇತಿ ಪಡೆದಿರುವ ಪ್ರಮಾಣ ಪತ್ರ ಹೊಂದಿರಬೇಕು. |
| 2 | ಡಾಟಾ ಎಂಟ್ರಿ ಆಪರೇಟರ್ | ಮೆರಿಟ್ ಆಧಾರದ ಮೇಲೆ ನೇರ ನೇಮಕಾತಿ ಮೂಲಕ | (1) ಕನ್ನಡವನ್ನು ಒಂದು ಭಾಷೆಯನ್ನಾಗಿ ಪಿ.ಯು.ಸಿ ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ತೇರ್ಗಡೆ ಹೊಂದಿರಬೇಕು.<br><br>(2) ಕಂಪ್ಯೂಟರ್ ತರಬೇತಿ ಕೋರ್ಸ್‌ನಲ್ಲಿ ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ಯಾವುದೇ ಸಂಸ್ಥೆಯಿಂದ ಆರು ತಿಂಗಳ ತರಬೇತಿ ಪಡೆದಿರುವ ಪ್ರಮಾಣ ಪತ್ರ ಹೊಂದಿರಬೇಕು.<br><br>(3) ಆಯ್ಕೆ ಸಮಿತಿಯು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಪ್ರತಿಷ್ಠಿತ ಸಂಸ್ಥೆಗಳ ಮೂಲಕ ನಡೆಸತಕ್ಕದ್ದು; ಮತ್ತು<br><br>(4) ಅರ್ಹತಾ ಪರೀಕ್ಷೆಯಲ್ಲಿ ಪಡೆದ 50% ಅಂಕಗಳನ್ನು ಮತ್ತು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಪಡೆದ 50% ಅಂಕಗಳನ್ನು ಒಳಗೊಂಡಿರುವ ಅರ್ಹತೆಯ ಆಧಾರದ ಮೇಲೆ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸಬೇಕು. |
| 3 | ವಾಟರ್ ಆಪರೇಟರ್ | ಎಸ್.ಎಸ್.ಎಲ್.ಸಿ ಅಥವಾ ಸಮಾನಾಂತರ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಆಧರಿಸಿ ನೇರ ನೇಮಕಾತಿ ಮೂಲಕ | ಕನ್ನಡವನ್ನು ಒಂದು ವಿಷಯವನ್ನಾಗಿ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. |
| 4 | ಅಟೆಂಡೆಂಟ್ | ಎಸ್.ಎಸ್.ಎಲ್.ಸಿ ಅಥವಾ ಸಮಾನಾಂತರ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಆಧರಿಸಿ ನೇರ ನೇಮಕಾತಿ ಮೂಲಕ | ಕನ್ನಡವನ್ನು ಒಂದು ವಿಷಯವನ್ನಾಗಿ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. |
| 5 | ಕ್ಲೀನರ್ಸ್ | ಎಸ್.ಎಸ್.ಎಲ್.ಸಿ ಅಥವಾ ಸಮಾನಾಂತರ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಆಧರಿಸಿ ನೇರ ನೇಮಕಾತಿ ಮೂಲಕ | ಕನ್ನಡವನ್ನು ಒಂದು ವಿಷಯವನ್ನಾಗಿ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. |

Scanned with CamScanner

ಷರಾ:

1. ವೇತನ ಶ್ರೇಣಿಯು ಕಾರ್ಮಿಕ ಇಲಾಖೆಯು ಕಾಲ ಕಾಲಕ್ಕೆ ನಿಗದಿಪಡಿಸುವ ಕನಿಷ್ಠ ವೇತನದ ಅನುಸಾರ ಪರಿಷ್ಕರಣೆಗೆ ಒಳಪಟ್ಟಿರುತ್ತದೆ.
2. ಪ್ರತಿ ಗ್ರಾಮ ಪಂಚಾಯಿತಿಯ ಹುದ್ದೆಗಳ ಸಂಖ್ಯೆಯನ್ನು ಪ್ರತ್ಯೇಕವಾದ ಸರ್ಕಾರಿ ಆದೇಶದಲ್ಲಿ ಒದಗಿಸಲಾಗುತ್ತದೆ.

ಕರ್ನಾಟಕ ರಾಜ್ಯಪಾಲರ<br>ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

(ಪಿ. ಶಿವಶಂಕರ್)<br>ನಿರ್ದೇಶಕರು (ಪಂ.ರಾಜ್) ಮತ್ತು<br>ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ<br>ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಇವರಿಗೆ :**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಈ ಅಧಿಸೂಚನೆಯನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಕೋರಿದೆ.

**ಪ್ರತಿ:**

1. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಕೆ.ಜಿ. ರಸ್ತೆ, ಗಾಂಧಿನಗರ, ಬೆಂಗಳೂರು.
2. ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
3. ಎಲ್ಲಾ ಜಿಲ್ಲಾ ಪಂಚಾಯತಿಯ ಉಪಕಾರ್ಯದರ್ಶಿಗಳು.
4. ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿವಾಹಕ ಅಧಿಕಾರಿಗಳು.
5. ಎಲ್ಲಾ ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು.
6. ಸಿಸ್ಟಮ್ ಮ್ಯಾನೇಜರ್, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ. (ವೆಬ್ ಸೈಟ್‌ನಲ್ಲಿ ಅಳವಡಿಸಲು)

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.



Scanned with CamScanner